ಯಾವುದಾದರೊಂದು ಅನಿರೀಕ್ಷಿತವಾದ ಸೋಲಿನ ಘಟನೆ ನಡೆದು ನಿನ್ನ ಹೃದಯ ನಿರುತ್ಸಾಹಗೊಂಡಿದೆಯೇ? ಇದೂ **ನನ್ನಿಂದಲೇ** ಎಂದು ತಿಳಿದುಕೊ. ಏಕೆಂದರೆ, ಆ ದೌರ್ಬಲ್ಯವನ್ನೆಲ್ಲ ತೊಡೆದುಹಾಕಲು ನಿನ್ನ ಹೃದಯ ಮತ್ತು ನಿನ್ನ ಆತ್ಮ ಸತತವೂ **ನನ್ನ** ಕಣ್ಣೆದುರು ಇರಬೇಕು; ಅವುಗಳು **ನನ್ನ** ನಾಮದಿಂದ ಪ್ರಜ್ವಲಿಸಬೇಕು.

ನಿನ್ನ ಆತ್ಮೀಯರಿಂದ ಯಾವ ಸುದ್ದಿಯೂ ಬಂದಿಲ್ಲವೆಂದು ನೀನು ಚಿಂತೆ, ಅಸಮಾಧಾನಗಳಿಂದ ಕೂಡಿರುವೆಯಾ? ಇದೂ **ನನ್ನಿಂದಲೇ** ಎಂದು ತಿಳಿದುಕೊ. ದುರ್ಬಲಗೊಳ್ಳುತ್ತಿರುವ ನಿನ್ನ ಚೈತನ್ಯವನ್ನು ನಾನು ಪರೀಕ್ಷೆ ಮಾಡುತ್ತಿರುವೆನು. ನೀನು ಕೊಟ್ಟಿರುವ ಭರವಸೆಯ ಮೇಲೆ ನಿನಗಿರುವ ಶ್ರದ್ಧೆಯ ಕೋಟೆಯನ್ನು, ನಿನ್ನ ಆತ್ಮೀಯರಿಗಾಗಿ ಮಾಡುವ ನಿನ್ನ ವ್ಯಾಕುಲವಾದ ಪ್ರಾರ್ಥನೆಗಳ ಸಾಮರ್ಥ್ಯವನ್ನು ಪರೀಕ್ಷಿಸುತ್ತಿರುವೆನು. ಏಕೆಂದರೆ ನೀನು ಅವರ ರಕ್ಷಣೆಯನ್ನು ನನ್ನ ನಿಷ್ಕಳಂಕ ತಾಯಿಗೆ ಒಪ್ಪಿಸಿರಲಿಲ್ಲವೇ? ಅವರ ಕ್ಷೇಮವನ್ನು ನನ್ನ ಪ್ರೀತಿಗೆ ಸಮರ್ಪಿಸಿರಲಿಲ್ಲವೇ?

ತಾತ್ಕಾಲಿಕವಾಗಿ ಅಥವಾ ಶಾಶ್ವತವಾಗಿ ನೀನು ಯಾವುದೋ ಗಂಭೀರ ಕಾಯಿಲೆಗೆ ತುತ್ತಾಗಿ ಹಾಸಿಗೆ ಹಿಡಿದರೆ, ಅದೂ **ನನ್ನಿಂದಲೇ.** ಏಕೆಂದರೆ ನಿನ್ನ ದೈಹಿಕ ಬಲಹೀನತೆಯಲ್ಲಿ, ನಿನಗೆ ನೀಡಲಾದ ಪರೀಕೆಯಲ್ಲಿ ನೀನು ಇನ್ನೂ ಹೆಚ್ಚಾಗಿ, ತೀವ್ರವಾಗಿ ನನ್ನನ್ನು ಕರೆಯಬೇಕೆಂಬುದು ನನ್ನ ಬಯಕೆ. ಈ ಪರೀಕ್ಷೆಯನ್ನು ಗೊಣಗಾಡದೆ ಎದುರಿಸಬೇಕೆಂದೂ, ಅದಕ್ಕೆ ಅನುಗುಣವಾಗಿ ನಾನು ಯೋಜಿಸಿರುವ ಪರಿಹಾರಗಳ ನಡುವೆ ನೀನು ತಲೆಹಾಕದೆ, ನಿನ್ನ ಮೇಲೆ ನಾನು ಹರಿಸುವ ಕೃಪೆಗೆ ನಮ್ರವಾಗಿ ತಲೆಬಾಗಿಸಬೇಕೆಂಬುದೇ ನನ್ನ ಆಸೆ.

ನೀನು ನನಗೋಸ್ಕರ ವಿಶೇಷವಾಗಿ ಏನನ್ನಾದರೂ ರಚಿಸಬೇಕೆಂದು ಬಯಸಿ, ಅದರ ಬದಲು ಕಾಯಿಲೆ ಹಿಡಿದು ನಿತ್ರಾಣದಿಂದ ಹಾಸಿಗೆ ಹಿಡಿದರೆ ತಿಳಿ, ಇದೂ **ನನ್ನಿಂದಲೇ.** ಏಕೆಂದರೆ, ನಿನ್ನ ವ್ಯವಹಾರಗಳಲ್ಲಿ ನೀನು ಮುಳುಗಿರುವಾಗ, ನಿನ್ನ ಗಮನವನ್ನು ನನ್ನಡೆಗೆ ಸೆಳೆಯಲು ಸಾಧ್ಯವಾಗದೆ ಹೋಗುವೆ. ಆಗ ನೀನು **ನನ್ನ** ಸೇವೆಯಲ್ಲೇ ಇರುವೆ, ನೀನು ಏನೂ ಅಲ್ಲ, ಎಂಬ ಅಗಾಧವಾದ ಸತ್ಯವನ್ನು ನಿನಗೆ ಮನವರಿಕೆ ಮಾಡಲು ಕಲಿಸುವೆ. ನನ್ನ ಕೆಲವು ಅತ್ಯುತ್ತಮ ಕಾರ್ಯಕರ್ತರು ನಿರಂತರ ಪ್ರಾರ್ಥನೆ ಮಾಡುವುದನ್ನು ಕಲಿಯುವ ಸಲುವಾಗಿ ಜೀವನದ ಚಟುವಟಿಕೆಗಳಿಂದ ದೂರ ಇರುವರು.

ಅನಿರೀಕ್ಷಿತವಾಗಿ ಯಾವುದಾದರೊಂದು ಹೊಣೆಗಾರಿಕೆಯನ್ನು ವಹಿಸಬೇಕಾಗಿ ಬಂದರೆ, ಹೋಗು, ನನ್ನ ಮೇಲೆ ಭರವಸೆ ಇಟ್ಟು ಅದನ್ನು ಮಾಡು. ನಾನೇ ಈ ಕಷ್ಟಗಳನ್ನು ತಂದಿರುವೆ, ಏಕೆಂದರೆ ಭಗವಂತ ನೀನು ಕೈಗೊಂಡಿರುವ ಎಲ್ಲ ಕಾರ್ಯಗಳನ್ನು, ಮಾರ್ಗಗಳನ್ನು, ಕರ್ತವ್ಯಗಳನ್ನು ಹರಸುವನು, ಆಶೀರ್ವದಿಸುವನು. ಇಂದು ನಾನು ಪವಿತ್ರವಾದ ತೈಲ ತುಂಬಿದ ಪಾತ್ರೆಯೊಂದನ್ನು ನಿನಗೆ ಕೊಡುವೆನು. ಅದನ್ನು ಸಾಕಷ್ಟು ಬಳಸು, ನನ್ನ ಕಂದ. ನಿನಗೆ ಒದಗುವ ಎಲ್ಲ ಕಷ್ಟ, ಎಲ್ಲ ತಿರಸ್ಕಾರ, ನಿನ್ನ ಕೆಲಸದ ಬಗ್ಗೆ ಮಾಡುವ ಅಪಹಾಸ್ಯ ಇವುಗಳಿಂದಾಗಿ ನಿನಗೆ ಕಿರುಕುಳವುಂಟಾದಾಗ, ನಿನ್ನ ದೌರ್ಬಲ್ಯ, ಅಸಹಾಯಕತೆಗಳು ನಿನ್ನ ಅರಿವಿಗೆ ಬಂದಾಗ – **ಅದು ನನ್ನಿಂದಲೇ** ಎಂಬ ತೈಲದಿಂದ ಸವರು.

ಪ್ರತಿಯೊಂದು ಅಪಹಾಸ್ಯ ಭಗವಂತನಿಂದ ಬಂದಿರುವ ಒಂದು ಎಚ್ಚರಿಕೆಯೆಂದು ನೀನು ನೆನಪಿಟ್ಟುಕೊ. ಆದ ಕಾರಣ ಇಂದು ನಿನಗೆ ತಿಳಿಸಿದ್ದನ್ನೆಲ್ಲಾ ಹೃದಯದಲ್ಲಿ ಇಟ್ಟುಕೊ: **ಇದು ನನ್ನಿಂದಲೇ.** ಇದನ್ನು ಪಾಲಿಸು. ಯಾವಾಗ ನೀನು ಎಲ್ಲದರಲ್ಲಿಯೂ **ನನ್ನನ್ನೇ** ನೋಡಲು ಕಲಿಯುವೆಯೋ ಆವಾಗ ಪ್ರತಿಯೊಂದು ಕುಟುಕು, ಚುಚ್ಚುಗಳೂ ಮೊಂಡಾಗುವವು. ನಿನ್ನ ಆತ್ಮವನ್ನು ಪರಿಪೂರ್ಣಗೊಳಿಸುವ ಸಲುವಾಗಿ ಎಲ್ಲವೂ ನನ್ನಿಂದಲೇ ಕಳುಹಿಸಲ್ಪಟ್ಟಿದೆ. **ಇದು ನನ್ನಿಂದಲೇ.** *

## ತ್ಯಾಗರಾಜರ ಭಕ್ತಿ

ಸಂತ ತ್ಯಾಗರಾಜರು ಸದಾ ರಾಮನಾಮ, ಜಪಗಳಲ್ಲೇ ನಿರತರಾಗಿರುತ್ತಿದ್ದರು. ಅದಕ್ಕಾಗಿ ಅವರ ಅಣ್ಣನಿಗೆ ಕೋಪ ಬಂದು, ತ್ಯಾಗರಾಜರು ಪೂಜೆ ಮಾಡುತ್ತಿದ್ದ ಶ್ರೀರಾಮನ ವಿಗ್ರಹವನ್ನು ಕಾವೇರಿ ನದಿಗೆ ಎಸೆದುಬಿಟ್ಟರು. ಮರುದಿನ ಬೆಳಿಗ್ಗೆ ಪೀಠದಲ್ಲಿ ವಿಗ್ರಹವಿಲ್ಲದ್ದನ್ನು ನೋಡಿ ತ್ಯಾಗರಾಜರಿಗೆ ತುಂಬಾ ದುಃಖವಾಯಿತು. 'ನನ್ನ ಬಂಧುಗಳು ಇಷ್ಟೊಂದು ತೊಂದರೆ ಮಾಡುತ್ತಿದ್ದರೂ ಸುಮ್ಮನಿರುವೆಯಲ್ಲಾ!' ಎಂದು ಅವರು ತಮಗಾದ ಅನ್ಯಾಯ, ದುಃಖವನ್ನು ತೋಡಿಕೊಂಡರು. ಒಂದು ದಿನ ರಾತ್ರಿ, ಕನಸಿನಲ್ಲಿ ಶ್ರೀರಾಮನು ಕಾಣಿಸಿಕೊಂಡು, ಆ ವಿಗ್ರಹ ಎಲ್ಲಿದೆ ಎಂಬುದನ್ನು ತಿಳಿಸಿಕೊಟ್ಟನು. ತ್ಯಾಗರಾಜರು ಕಾವೇರೀತೀರಕ್ಕೆ ಹೋಗಿ ಹುಡುಕಿದಾಗ ಆ ವಿಗ್ರಹ ಸಿಕ್ಕಿತು. ತ್ಯಾಗರಾಜರ ಸಂತೋಷಕ್ಕೆ ಪಾರವೇ ಇರಲಿಲ್ಲ. ಎಲ್ಲ ವಿಧಿಗಳೊಡನೆ ಆ ವಿಗ್ರಹವನ್ನು ಮರಳಿ ಪೀಠದಲ್ಲಿ ಸ್ಥಾಪಿಸಿ, ಪೂಜೆಮಾಡಿ, ಆನಂದದಿಂದ ಹಾಡಿದರು.

ಅಷ್ಟಾದರೂ ತ್ಯಾಗರಾಜರಿಗೆ ಸಂಪೂರ್ಣ ಸಮಾಧಾನವಾಗಲಿಲ್ಲ. ಅವರ ಮಗಳ ಮದುವೆಯ ಸಂದರ್ಭದಲ್ಲಿ ಅವರ ಶಿಷ್ಯ ವಾಲಾಜಪೇಟೆ ವೆಂಕಟರಮಣ ಭಾಗವತರು ಕೋದಂಡರಾಮನ ಚಿತ್ರವನ್ನು ದೂರದ ಊರಿನಿಂದ ಕಾಲುನಡಿಗೆಯಲ್ಲೇ ಹೊತ್ತುತಂದು, ತ್ಯಾಗರಾಜರಿಗೆ ಉಡುಗೊರೆಯಾಗಿ ಕೊಟ್ಟರು. ಹಲವು ವರ್ಷಗಳ ಹಿಂದೆ ಕಳೆದುಹೋಗಿದ್ದ ಶ್ರೀರಾಮ ಈಗ ಈ ಚಿತ್ರದ ಮೂಲಕ ಮರಳಿ ದೊರಕಿದಂತಾಗಿ, ಅತ್ಯಾನಂದದಿಂದ ಅವರು 'ನನ್ನು ಪಾಲಿಂಪ' ಎಂಬ ಕೀರ್ತನೆಯನ್ನು ಹಾಡಿದರು. ಆ ಚಿತ್ರವನ್ನು ರಾಮನ ವಿಗ್ರಹದ ಜೊತೆಯಲ್ಲಿಟ್ಟು ಪೂಜೆಮಾಡತೊಡಗಿದರು ತ್ಯಾಗರಾಜರು. ಅಂತರಂಗದಲ್ಲೆಲ್ಲ ಭಗವಂತನನ್ನೇ ತುಂಬಿಕೊಂಡ ಭಕ್ತನಿಗೆ ಬಾಹ್ಯಮೂರ್ತಿಯಲ್ಲೂ ಅವನ ಜೀವಂತಮೂರ್ತಿ ಕಾಣಿಸುವುದರಲ್ಲಿ ಆಶ್ಚರ್ಯವೇನಿದೆ!